**ದಿನಾಂಕಃ 14.07.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

ಮುಂದುವರಿದ ಪಾಟೀ ಸವಾಲು: ಎದುರುದಾರ ಪರ ವಕೀಲರಿಂದಃ

1) ನಿ.ಪಿ.**1** ಕ್ರಯಪತ್ರಕ್ಕೆ ಯಾವುದೇ ಲಗತ್ತು ನಕ್ಷೆ ಇಲ್ಲ ಎಂದರೆ ಸರಿ. ಸದರಿ ಕ್ರಯ ಪತ್ರದಲ್ಲಿ ಒಟ್ಟು ವಿಸ್ತೀರ್ಣ **3,825** ಚದರ ಅಡಿಯನ್ನು ಮಾತ್ರ ಕಾಣಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.**2** ಹಿಂಬರಹದಲ್ಲಿ **306** ಚದರ ಅಡಿಯನ್ನು ನಮೂದಿಸಲಾಗಿದೆ. ಸಾಕ್ಷಿ ಮುಂದುವರೆದು ಆಗ್ನೇಯ ಭಾಗದಲ್ಲಿ ಎಂದಿದ್ದಾರೆ. ನಿ.ಪಿ.**1** ಮತ್ತು **2** ರಲ್ಲಿ ದಕ್ಷಿಣಕ್ಕೆ ಕನ್ಸರ್ವೆನ್ಸಿ ರಸ್ತೆಯನ್ನು ಕಾಣಿಸಲಾಗಿದೆ ಎಂದರೆ ಸರಿ. ಅದರ ಅಗಲ ಎಷ್ಟು ಎಂದು ನನಗೆ ಗೊತ್ತಿಲ್ಲ. ಅರ್ಜಿ ಸ್ವತ್ತು ಕನ್ಸರ್ವೆನ್ಸಿ ರಸ್ತೆಯಲ್ಲಿ ಇದೆ ಎಂದರೆ ಸರಿಯಲ್ಲ.

2) ನಿ.ಪಿ.**6** ದಾಖಲೆಯಲ್ಲಿ ಅಲಂಕಾರ್ ಫ್ರೂಟ್ಸ್ ಸ್ಟಾಲ್ ಶಾಪ್ ನಂಬರ್ **1** ರ ಪಕ್ಕದಲ್ಲಿ ಇತ್ತು ಎಂದರೆ ಸರಿ. ನ್ಯಾಯಾಲಯಕ್ಕೆ ಗುರುತಿಸುವುದಕ್ಕೆ ಅನುಕೂಲವಾಗುವಂತೆ ಮುಂಜೂರು ನಕ್ಷೆಯನ್ನೇ ಹಾಜರುಪಡಿಸಿದ್ದೇನೆ. ಮಂಜೂರು ನಕ್ಷೆಯಲ್ಲಿ ದೇವಸ್ಥಾನದ ಪಕ್ಕದಲ್ಲಿ ಉತ್ತರದ ಭಾಗಕ್ಕೆ ಅಲಂಕಾರ್ ಫ್ರೂಟ್ಸ್ ಸ್ಟಾಲ್ ಅಂಗಡಿ ಇತ್ತು ಎಂದರೆ ಸರಿ. ಅದನ್ನು ರಾಮಕೃಷ್ಣ ಮತ್ತು ಸಿದ್ದಪ್ಪ ನಡೆಸುತ್ತಿದ್ದರು ಎಂದರೆ ಸರಿಯಲ್ಲ, ಸಿದ್ದಪ್ಪ ಮಾತ್ರ ನಡೆಸುತ್ತಿದ್ದರು. ಸಿದ್ದಪ್ಪ ರಾಮಕೃಷ್ಣ ರವರ ಅಣ್ಣನಾಗಿದ್ದಾರೆ.

3) ದೇವಸ್ಥಾನದ ವಿಸ್ತೀರ್ಣವನ್ನು ನಿ.ಪಿ.**6** ರಲ್ಲಿ **1904** ಚದರ ಅಡಿ ಎಂದು ಕಾಣಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದೇವಸ್ಥಾನದ ಉತ್ತರ ಭಾಗದಲ್ಲಿ ನನ್ನ ಸ್ವತ್ತು ಇದೆ ಎಂದರೆ ಉತ್ತರದಲ್ಲಿ ಒಂದು ಅಂಗಡಿ ಇತ್ತು ಮತ್ತು ನನ್ನ ಸ್ವತ್ತು ದಕ್ಷಿಣದಲ್ಲಿಯೂ ಇದೆ. ಮಂಜೂರು ನಕ್ಷೆಯಲ್ಲಿ ದೇವಸ್ಥಾನವನ್ನು ಕಾಣಿಸಲಾದಗಿದೆ. ದೇವಸ್ಥಾನ ನನಗೆ ಸಂಬಂಧಪಟ್ಟಿಲ್ಲ ಎಂದರೆ ಸರಿಯಲ್ಲ, ನನಗೆ ಮತ್ತು ನನ್ನ ಸಹೋದರರಿಗೆ ಸಂಬಂಧಿಸಿದೆ. ದೇವಸ್ಥಾನದ ದಕ್ಷಿಣದ ಭಾಗಕ್ಕೆ ನನ್ನ ಯಾವುದೇ ಸ್ವತ್ತು ಇಲ್ಲ ಎಂದರೆ ಸರಿ. ಅರ್ಜಿ ಸ್ವತ್ತು ದೇವಸ್ಥಾನದ ದಕ್ಷಿಣ ಭಾಗದಲ್ಲಿ ಇದೆ ಎಂದರೆ ಸರಿಯಲ್ಲ, ದಕ್ಷಿಣ ಭಾಗದ ಆಗ್ನೆಯ ದಿಕ್ಕಿನಲ್ಲಿ ಇದೆ.

4) ಅರ್ಜಿ ಸ್ವತ್ತಿಗೆ ಸಂಬಂಧಿಸಿದಂತೆ **1** ಮತ್ತು **2** ನೇ ಎದುರುದಾರರು ಬಿ.ಬಿ.ಎಂ.ಪಿ ಯಿಂದ ಬಂದ ನೋಟೀಸನ್ವಯ ತೆರಿಗೆ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಿಃ**18.12.2002** ರ ನೋಟೀಸಿನ್ವಯ ಅವರು ತೆರಿಗೆ ಪಾವತಿಸುತ್ತಿದ್ದಾರೆ ಎಂದರೆ ಸರಿಯಲ್ಲ, ನಾನೇ ಪಾವತಿಸುತ್ತಿದ್ದೇನೆ. ನಾನು ತೆರಿಗೆ ಪಾವತಿಸುತ್ತಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಆರ್.**2** ನಕ್ಷೆಯಲ್ಲಿ ಅರ್ಜಿ ಸ್ವತ್ತನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ. ಅರ್ಜಿ ಸ್ವತ್ತು ನನಗೆ ಸೇರಿದ ಸ್ವತ್ತು ಅಲ್ಲಾ ಎಂದರೆ ಸರಿಯಲ್ಲ, ಅದು ಕಾರ್ಪೋರೇಷನ್ ಗೆ ಸೇರಿದ ಸ್ವತ್ತು ಎಂದರೆ ಸರಿಯಲ್ಲ. ಕಾರ್ಪೋರೇಷನ್ ನವರು ಎದುರುದಾರರಿಗೆ ಸ್ವತ್ತಿನ ಸ್ವಾಧೀನ ಕೊಟ್ಟಿದ್ದಾರೆ

ಎಂದರೆ ಸರಿಯಲ್ಲ. ಅರ್ಜಿ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ಅಲಂಕಾರ್ ಫ್ರೂಟ್ಸ್ ಸ್ಟಾಲ್ ಹಣ್ಣಿನ ಅಂಗಡಿಯವರಿಗೆ ನಾನು ಬಾಡಿಗೆ ರಶೀದಿಗಳನ್ನು ನೀಡಿರುವ ಬಗ್ಗೆ ಸದರಿ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಅಲಂಕಾರ್ ಫ್ರೂಟ್ಸ್ ಸ್ಟಾಲ್ ಮತ್ತು ಮಂಜುನಾಥ ಪೇಪರ್ ಮಾರ್ಟ್ ಎರಡೂ ಬೇರೆ ಬೇರೆ ಅಂಗಡಿಗಳು ಎಂದರೆ ಸರಿ, ಅಲಂಕಾರ್ ಫ್ರೂಟ್ಸ್ ಸ್ಟಾಲ್ ಹೋದ ನಂತರ ಸದರಿ ಸ್ಥಳದಲ್ಲಿ ಮಂಜುನಾಥ ಪೇಪರ್ ಮಾರ್ಟ್ ಬಂದಿದೆ. ಅಲಂಕಾರ್ ಫ್ರೂಟ್ಸ್ ಸ್ಟಾಲ್ ಇದ್ದ ಜಾಗದಲ್ಲಿ ಮಂಜುನಾಥ ಪೇಪರ್ ಮಾರ್ಟ್ ಬಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಲಂಕಾರ್ ಫ್ರೂಟ್ಸ್ ಸ್ಟಾಲ್ ಉತ್ತರಕ್ಕೆ ಇತ್ತು ಮತ್ತು ಮಂಜುನಾಥ ಪೇಪರ್ ಮಾರ್ಟ್ ದಕ್ಷಿಣಕ್ಕೆ ಇದೆ ಎಂದರೆ ಸರಿ. ಅದರ ಮಧ್ಯದಲ್ಲಿ ದೇವಸ್ಥಾನ ಇದೆ ಎಂದರೆ ಸರಿ.ಅರ್ಜಿ ಸ್ವತ್ತಿನಲ್ಲಿ ಮತ್ತು ದೇವಸ್ಥಾನಕ್ಕೆ ಸೇರಿದ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.